ವಿಶಾಖ ಎನ್.



# ರಜನಿ–ಮಣಿ ಮತ್ತೆ ಮೋಡಿ?

ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್ ಹಾಗೂ ತಾರಾ ವರ್ಚಸ್ಸಿನ ನಿರ್ದೇಶಕ ಮಣಿರತ್ನಂ ಮತ್ತೆ ಒಗ್ಗೂಡುತ್ತಿದ್ದಾರೆ. 'ದಳಪತಿ' ಸಿನಿಮಾ ತೆರೆಕಂಡ ಮೂವತ್ತಮೂರು ವರ್ಷಗಳ ನಂತರ ಈ ಜೋಡಿ ಒಗ್ಗೂಡುತ್ತಿದೆ. ಹಳೆಯ ಜೋಡಿ ಮತ್ತೆ ಮೋಡಿ ಮಾಡುವುದೆ?

ರಜನಿ–ಮಣಿ ಮತ್ತೆ ಒಗ್ಗೂಡುತ್ತಿರುವ ಸುದ್ದಿ ಅಧಿಕೃತವಾಗಿಯೇನೂ ಪ್ರಕಟಗೊಂಡಿಲ್ಲ. ಉದ್ದೇಶಿತ ಹೊಸ ಚಿತ್ರದ ಪ್ರಕಟಣೆ ರಜನಿ ಹುಟ್ಟುಹಬ್ಬದ ಸಂದರ್ಭದಲ್ಲಿ (ಡಿಸೆಂಬರ್ 12) ಹೊರಬೀಳಲಿದೆ ಎಂದು ತಮಿಳು ಚಿತ್ರರಂಗ ಮಾತನಾಡಿಕೊಳ್ಳುತ್ತಿದೆ.

ದಸರೆಯ ಆಸುಪಾಸಿನಲ್ಲಿ ರಜನಿಕಾಂತ್ ಬೇರೆ ಬೇರೆ ಕಾರಣಗಳಿಂದಾಗಿ ಸುದ್ದಿಯಲ್ಲಿದ್ದರು. ಅವರ ತೀವ್ರ ಅನಾರೋಗ್ಯದ ಸುದ್ದಿ ಅಭಿಮಾನಿಗಳಲ್ಲಿ ಕಳವಳ ಉಂಟುಮಾಡಿತ್ತು. ನವರಾತ್ರಿ ವೇಳೆಗೆ ಆಸ್ಪತ್ರೆಯಿಂದ ಹೊರಬಂದ ರಜನಿ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾಗಿದ್ದರು. ಆ ಸಂಭ್ರಮವನ್ನು ಹೆಚ್ಚಿಸುವಂತೆ 'ವೆಟ್ಟೈಯಾನ್' ಸಿನಿಮಾ ತೆರೆಕಂಡಿದೆ.

'ವೆಟ್ಟೈಯಾನ್' ಹಲವು ವಿಶೇಷಗಳನ್ನು ಒಳಗೊಂಡಿರುವ ಸಿನಿಮಾ. ಈ ಚಿತ್ರದ ನಿರ್ದೇಶನ ಸೂಕ್ಷ್ಮಸಂವೇದನೆಯ ನಿರ್ದೇಶಕ ಎಂದು ಹೆಸರಾದ ಟಿ.ಜಿ. ಜ್ಞಾನವೇಲ್ ಅವರದು. ಅವರ ನಿಕಟಪೂರ್ವ ಸಿನಿಮಾ 'ಜೈ ಭೀಮ್' ತನ್ನ ಸಾಮಾಜಿಕ ಕಾಳಜಿಯಿಂದ ಸಹೃದಯರ ಗಮನಸೆಳೆದಿತ್ತು. ಜನಪರ ಕಾಳಜಿಗಳ ನಿರ್ದೇಶಕ ಹಾಗೂ ಜನಪ್ರಿಯ ನಟನ ಸಮೀಕರಣದ 'ವೆಟ್ಟೈಯಾನ್' ಚಿತ್ರದ ತಾರಾಗಣದಲ್ಲಿ ಘಟಾನುಘಟಿಗಳಿದ್ದಾರೆ. ಮುಖ್ಯವಾಗಿ, ರಜನಿ ಜೊತೆಗೆ ಅಮಿತಾಭ್ ಬಚ್ಚನ್ ಕಾಣಿಸಿಕೊಂಡಿದ್ದಾರೆ. ಈ ಸೂಪರ್ ಸ್ಟಾರ್‌ಗಳಿಬ್ಬರೂ ಮೂರು ದಶಕಗಳ ನಂತರ ತೆರೆ ಹಂಚಿಕೊಂಡಿರುವುದು ವಿಶೇಷ.

ರಜನಿ, ಅಮಿತಾಭ್‌ರೊಂದಿಗೆ ರಾಣಾ ದಗ್ಗುಬಾಟಿ, ಮಂಜು ವಾರಿಯರ್, ಫಹಾದ್ ಫಾಸಿಲ್, ರಿತಿಕಾ ಸಿಂಗ್, ದುಶಾರಾ ವಿಜಯನ್, ಮುಂತಾದವರು ತಾರಾಗಣದಲ್ಲಿದ್ದಾರೆ. 'ವೆಟ್ಟೈಯಾನ್' ಚಿತ್ರದಲ್ಲಿ ರಜನಿ ಮತ್ತೊಮ್ಮೆ ತಮ್ಮ ನೆಚ್ಚಿನ ಪೊಲೀಸ್ ಯೂನಿಫಾರ್ಮ್ ತೊಟ್ಟಿದ್ದಾರೆ.

**ವಯಸ್ಸು ಹಾಗೂ ವರ್ಚಸ್ಸಿನ ಸಮೀಕರಣದಿಂದಾಗಿ, ರಜನಿ ಹಾಗೂ ಮಣಿ ಒಟ್ಟಿಗೆ ಮಾಡುತ್ತಾರೆನ್ನಲಾದ ಸಿನಿಮಾ ನಿರೀಕ್ಷೆಗಳನ್ನು ಹುಟ್ಟುಹಾಕಿದೆ.**





'ವೆಟ್ಟೈಯಾನ್'ನಿಂದ ಮತ್ತೊಮ್ಮೆ ರಜನಿ–ಮಣಿ ಚಿತ್ರದ ವಿಷಯಕ್ಕೆ ಬರೋಣ. 'ದಳಪತಿ' ತಮಿಳು ಚಿತ್ರರಂಗದ ವಿಶಿಷ್ಟ ಚಿತ್ರಗಳಲ್ಲೊಂದು. ಮಹಾಭಾರತದ ದುರ್ಯೋಧನ ಹಾಗೂ ಕರ್ಣನ ಸ್ನೇಹವನ್ನು ಆಧುನಿಕ ಪರಿವೇಷದಲ್ಲಿ ಪುನರ್ ಸೃಷ್ಟಿಸುವ ಪ್ರಯತ್ನ ಮಣಿರತ್ನಂ ಅವರದಾಗಿತ್ತು. ಕರ್ಣನನ್ನು ಹೋಲುವ ಸೂರ್ಯ ಎನ್ನುವ ಪಾತ್ರದಲ್ಲಿ ರಜನಿ ನಟಿಸಿದ್ದರೆ, ದುರ್ಯೋಧನನನ್ನು ಹೋಲುತ್ತಿದ್ದ ದೇವರಾಜ್ ಎನ್ನುವ ಪಾತ್ರದಲ್ಲಿ ಮಮ್ಮುಟ್ಟಿ ನಟಿಸಿದ್ದರು. ತಾರೆಗಳಿಬ್ಬರ ಅಪೂರ್ವ ಮಿಲನವನ್ನು ಭೂಗತ ಲೋಕದ ತಾಕಲಾಟಗಳ ಕಥನದ ಹಿನ್ನೆಲೆಯಲ್ಲಿ ಮಣಿ ನಿರೂಪಿಸಿದ್ದರು. 1991ರಲ್ಲಿ ತೆರೆಕಂಡಿದ್ದ 'ದಳಪತಿ' ಬಹು ದೊಡ್ಡ ಯಶಸ್ಸನ್ನು ಕಂಡಿತ್ತು. ಆದರೆ, ಈ ಯಶಸ್ಸಿನ ಮುಂದುವರಿಕೆಯ ರೂಪದಲ್ಲಿ ಮಣಿ ಹಾಗೂ ರಜನಿ ಮತ್ತೆ ಒಟ್ಟಿಗೆ ಕೆಲಸ ಮಾಡಿರಲಿಲ್ಲ. ಕಳೆದ ಮೂರು ದಶಕಗಳ ಅವಧಿಯಲ್ಲಿ ಇಬ್ಬರೂ ಭಿನ್ನ ಪಥಿಕರಾಗಿ, ಹೊಸ ಎತ್ತರಗಳನ್ನು ಏರಿದರೂ, ಒಟ್ಟಿಗೆ ಕೆಲಸ ಮಾಡುವುದು ಈವರೆಗೆ ಸಾಧ್ಯವಾಗಿರಲಿಲ್ಲ.

ಕೆಲವು ವರ್ಷಗಳ ಹಿಂದಷ್ಟೇ ರಜನಿ ನಟನೆಯಿಂದ ದೂರವಾದಂತೆ ವರ್ತಿಸುತ್ತಿದ್ದರು. ನಂತರ ಒಂದರ ನಂತರ ಮತ್ತೊಂದು ಸಿನಿಮಾದಲ್ಲಿ ನಟಿಸಿದರೂ, ಯಶಸ್ಸಿನ ಗ್ರಾಫ್ ಒಂದೇ ಬಗೆಯದಾಗಿಲ್ಲ. ಭರ್ಜರಿ ಯಶಸ್ಸಿನ ಚಿತ್ರಗಳು ಇರುವಂತೆಯೇ ಸೋತಿರುವ ಸಿನಿಮಾಗಳೂ ಇವೆ. ಮಣಿರತ್ನಂ ಹಾದಿಯೂ ಭಿನ್ನವೇನಲ್ಲ. ಆದರೆ, ಸೋಲುಗಳಿಂದ ವಿಚಲಿತರಾಗದ ಅವರು ನಿರಂತರ ಪ್ರಯೋಗಗಳಲ್ಲಿ ತೊಡಗಿಕೊಂಡಿದ್ದಾರೆ; ಕಾಲಕ್ಕೆ ತಕ್ಕಂತೆ ತಮ್ಮ ಸಿನಿಮಾ ವ್ಯಾಕರಣ ಬದಲಿಸಿಕೊಂಡು ಫಾರ್ಮ್ ಉಳಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ.

ರಜನಿ ಹಾಗೂ ಮಣಿ ಇಬ್ಬರೂ ಈಗ ಮಾಗಿದ ವಯಸ್ಸಿನವರು. ವಯಸ್ಸು ಹಾಗೂ ವರ್ಚಸ್ಸಿನ ಜೊತೆಗೆ, ಭರಪೂರ ನಿರೀಕ್ಷೆಯೂ ಸೇರಿಕೊಂಡು, ಇಬ್ಬರೂ ಮಾಡಬಹುದಾದ ಹೊಸ ಸಿನಿಮಾದ ಬಗ್ಗೆ ಚಿತ್ರರಸಿಕರ ನಿರೀಕ್ಷೆಗಳು ಗರಿಗೆದರಿವೆ. ■